## –:ಅಭ್ಯರ್ಥಿಗಳಿಗೆ ಸೂಚನೆ:–

1. ಅರ್ಹ ಅಭ್ಯರ್ಥಿಗಳ ಮೆರಿಟ್ ಲೀಸ್ಟ್‌ನ್ನು ದಿನಾಂಕ: 19–08–2017ರ **ಸಂಜೆ 6 ಘಂಟೆಗೆ** ಪ್ರಕಟಿಸಲಾಗುವುದು. ನಂತರ ಕೌನ್ಸಲಿಂಗ್ ಕರೆಪತ್ರವನ್ನು ದಿನಾಂಕ: 21–08–2017ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
2. ಅಭ್ಯರ್ಥಿಗಳ ಅರ್ಜಿ ಸಂಖ್ಯೆಯನ್ನು ಯೂಸರ್‌ಐಡಿಯಾಗಿ ಮತ್ತು ಹುಟ್ಟಿದ ದಿನಾಂಕವನ್ನು ಪಾಸ್‌ವರ್ಡ್ ಆಗಿ ಬಳಸಿ ಕೌನ್ಸಿಲಿಂಗ್ ಕರೆಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.
3. ದಿನಾಂಕ: **28–08–2017ರಿಂದ** 31–08–2017ರ ವರೆಗೆ ಮೊದಲನೇ ಸುತ್ತಿನ ಮತ್ತು 08–09–2017ರಂದು ಎರಡನೇ ಹಾಗೂ ಅಂತಿಮ ಸುತ್ತಿನ ಕೌನ್ಸಲಿಂಗ್ ಪ್ರಕ್ರಿಯೆ ನಡೆಸಲಾಗುವುದು. ಪ್ರತಿದಿನ ಕೌನ್ಸಲಿಂಗ್ ಪ್ರಾರಂಭವಾಗುವ 30 ನಿಮಿಷಕ್ಕೆ ಮುನ್ನ ಹಾಜರಾಗಬೇಕು.
4. ಕೌನ್ಸಲಿಂಗ್ ನಡೆಯುವ ಸ್ಥಳ

   **ಸರ್ಕಾರಿ ನರ್ಸಿಂಗ್ ಕಾಲೇಜ್,**
   **ವಿಕ್ಟೋರಿಯಾ ಆಸ್ಪತ್ರೆ ಆವರಣ,**
   **ರಕ್ತ ನಿಧಿ ಕಟ್ಟಡದ ಎದುರು,**
   **ಬೆಂಗಳೂರು–02**

5. **ಅಭ್ಯರ್ಥಿಗಳು ಈ ಕೆಳಕಂಡ ಮೂಲದಾಖಲಾತಿಗಳನ್ನು ಕೌನ್ಸಿಲಿಂಗ್ ಸಮಯದಲ್ಲಿ ಪರಿಶೀಲನೆಗೆ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು, ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್‌ಗೆ ಅವಕಾಶ ನೀಡಲಾಗುವುದಿಲ್ಲ.**

   **a)** ಎಸ್.ಎಸ್.ಎಲ್.ಸಿ ಮೂಲ ಅಂಕಪಟ್ಟಿ,

   **b)** ದ್ವಿತೀಯ ಪಿ.ಯು.ಸಿ ಮೂಲ ಅಂಕಪಟ್ಟಿ,

   **c)** ಮೂಲ ಜಾತಿ ಮತ್ತುಆದಾಯ ಪ್ರಮಾಣ ಪತ್ರ (ಸಕ್ಷಮ ಪ್ರಾಧಿಕಾರದಿಂದ ಪಡೆದು ಸಲ್ಲಿಸಬೇಕು)

   **d)** ದೇಹದಾರ್ಢ್ಯತೆ ಪ್ರಮಾಣ ಪತ್ರ (ಸರ್ಕಾರಿ ವೈದ್ಯರಿಂದ ಪಡೆದು ಸಲ್ಲಿಸಬೇಕು)

   **e)** ಕರ್ನಾಟಕ ರಾಜ್ಯದಲ್ಲಿ ವ್ಯಾಸಾಂಗ ಮಾಡಿರುವ ಪ್ರಮಾಣ ಪತ್ರ (ಕನಿಷ್ಠ 07 ವರ್ಷಗಳು)

   **f)** ಅಂಗವಿಕಲ ಕೋಟಾ ದಲ್ಲಿಆಯ್ಕೆ ಬಯಸುವವರು ದಿನಾಂಕ:28–08–2017ರ ಬೆಳಗ್ಗೆ 9.30ಕ್ಕೆ ಸಂಬಂಧಿಸಿದ ಪ್ರಮಾಣ ಪತ್ರಗಳೊಂದಿಗೆ ಹಾಜರಾಗುವುದು. (ವೈದ್ಯಕೀಯ ಮಂಡಳಿಯಿಂದ ಪಡೆದಿರುವ ಪ್ರಮಾಣ ಪತ್ರ).

   **g)** ಮಾಜಿ ಸೈನಿಕರ ಮಕ್ಕಳ ಮೀಸಲು ಕೋಟಾದಲ್ಲಿ ಆಯ್ಕೆ ಬಯಸುವವರು ದಿನಾಂಕ : 28–08–2017ರ ಬೆಳಗ್ಗೆ 9.30ಕ್ಕೆ ಸಂಬಂಧಿಸಿದ ಪ್ರಮಾಣ ಪತ್ರಗಳೊಂದಿಗೆ ಹಾಜರಾಗುವುದು.

   **h)** ಹೈದರಾಬಾದ್–ಕರ್ನಾಟಕ ಮೀಸಲು ಕೋಟಾದಲ್ಲಿ ಆಯ್ಕೆ ಬಯಸುವವರು ಮಾತ್ರ ಅದಕ್ಕೆ ಸಂಬಂಧಿಸಿದ ಪ್ರಮಾಣ ಪತ್ರ (ಸಕ್ಷಮ ಪ್ರಾಧಿಕಾರದಿಂದ ಪಡೆದು ಸಲ್ಲಿಸಬೇಕು)

   **i)** ಗಡಿನಾಡು ಮತ್ತು ಹೊರನಾಡು ಕನ್ನಡಿಗ ಅಭ್ಯರ್ಥಿಗಳು ಅದಕ್ಕೆ ಸಂಬಂದಿಸಿದ ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ಪ್ರಮಾಣ ಪತ್ರ ಹಾಜರುಪಡಿಸುವುದು.

6. **ಸೇವಾನಿರತ ನೌಕರರಿಗೆ (ಕಿರಿಯ ಮಹಿಳಾ ಆರೋಗ್ಯ ಸಹಾಯಕಿ) / ಆಶಾ ಕಾರ್ಯಕರ್ತೆಯರಿಗೆ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದಲ್ಲಿ ಪ್ರತ್ಯೇಕವಾಗಿ ಕೌನ್ಸಲಿಂಗ್‌ಗೆ ಕರೆಯಲಾಗುವುದು.**
7. ಅಭ್ಯರ್ಥಿಗಳು ಅರ್ಜಿ ಶುಲ್ಕವನ್ನು ಕಡ್ಡಾಯವಾಗಿ ಚಲನ್ ಮೂಲಕ ಪಾವತಿಸಿರಬೇಕು. ಶುಲ್ಕ ಪಾವತಿಸಿದ ಒಂದು ಮೂಲ ಚಲನ್ ಪ್ರತಿಯನ್ನು ಕೌನ್ಸಲಿಂಗ್ ಸಮಯದಲ್ಲಿ ಹಾಜರುಪಡಿಸಬೇಕು ಒಂದು ವೇಳೆ ಶುಲ್ಕ ಪಾವತಿಸದೇ ಇದ್ದಲ್ಲಿ ಕೌನ್ಸಲಿಂಗ್ ದಿನಾಂಕದಂದು ಶುಲ್ಕ ಪಾವತಿ ಚಲನ್ ಪ್ರತಿ ನೀಡತಕ್ಕದ್ದು.
8. **ಸರ್ಕಾರಿ ಶಾಲೆ ಮತ್ತು ಖಾಸಗಿ ನರ್ಸಿಂಗ್ ಶಾಲೆಗಳಲ್ಲಿ ಲಭ್ಯವಿರುವ ಸೀಟುಗಳ ವಿವರಗಳನ್ನು ಕೌನ್ಸಲಿಂಗ್ ದಿನಾಂಕಗಳ ಪ್ರತಿ ದಿನ ಸಂಜೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಸೀಟು ಲಭ್ಯವಿರುವುದನ್ನು ಗಮನಿಸಿಕೊಂಡು ಕೌನ್ಸಲಿಂಗ್‌ಗೆ ಹಾಜರಾಗುವುದು.**
9. ದ್ವಿತೀಯ ಪಿ.ಯು.ಸಿ ಯಲ್ಲಿ ಅಭ್ಯರ್ಥಿಗಳು ಇಂಗ್ಲೀಷ್ ವಿಷಯವನ್ನು ಕಡ್ಡಾಯವಾಗಿ ವ್ಯಾಸಾಂಗ ಮಾಡಿರುಬೇಕು ಒಂದುವೇಳೆ ಇಂಗ್ಲೀಷ್ ವಿಷಯವನ್ನು ವ್ಯಾಸಂಗ ಮಾಡದ ಅಭ್ಯರ್ಥಿಗಳು ಮೆರಿಟ್ ಲಿಸ್ಟ್‌ನಲ್ಲಿ ಸೇರ್ಪಡೆಗೊಂಡಿದ್ದಲ್ಲಿ ಅಂತಹ ಅಭ್ಯರ್ಥಿಗಳು ಕೌನ್ಸಲಿಂಗ್‌ಗೆ ಹಾಗರಾಗತಕ್ಕದ್ದಲ್ಲ.
10. ಕರ್ನಾಟಕರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ದ್ವಿತೀಯ ಪಿ.ಯು.ಸಿ ಪೂರ್ಣಗೊಳಿಸಿರುವ ಅಭ್ಯರ್ಥಿಗಳು ಒಂದು ವೇಳೆ ಮೆರಿಟ್ ಲಿಸ್ಟ್‌ನಲ್ಲಿ ಸೇರ್ಪಡೆಗೊಂಡಿದ್ದಲ್ಲಿ ಅಂತಹ ಅಭ್ಯರ್ಥಿಗಳು ಕೌನ್ಸಲಿಂಗ್‌ಗೆ ಹಾಜರಾಗತಕ್ಕದ್ದಲ್ಲ.
11. ಅಭ್ಯರ್ಥಿಗಳು ಅಪೂರ್ಣ ಹಾಗೂ ತಪ್ಪು ಮಾಹಿತಿ ನೀಡಿದ್ದಲ್ಲಿ ಅಂತಹ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ನೀಡದೆ ತಿರಸ್ಕರಿಸಲಾಗುವುದು.
12. **ಅರ್ಜಿ ಸಲ್ಲಿಸಿರುವ ಎಲ್ಲಾ ಅಭ್ಯರ್ಥಿಗಳಿಗೆ ಶುಶ್ರೂಷಾ ತರಬೇತಿಯ ಆಯ್ಕೆಯ ಖಾತರಿ ನೀಡಲಾಗುವುದಿಲ್ಲ.**

*****